## ಉಳಿಸೋದು ಸಾಧ್ಯವಿಲ್ಲ

ಗುರುಗಳು ಸತಿ ಸಾವಿತ್ರಿ ಕತೆಯನ್ನು ಹೇಳುತ್ತಿದ್ದರು. 'ಮಕ್ಕಳೇ, ಸಾವಿತ್ರಿ ತನ್ನ ಗಂಡನನ್ನು ಉಳಿಸಿಕೊಳ್ಳಲು ಯಮನ ಬಳಿ ಹೋರಾಡಿದಳು. ಈ ಕತೆಯ ನೀತಿ ಏನು?' ಗುಂಡ ಹೇಳಿದ, 'ಹೆಂಡತಿಯಿಂದ ಗಂಡನನ್ನು ಪಾರು ಮಾಡಲು ಆ ಯಮನಿಂದಲೂ ಸಾಧ್ಯವಿಲ್ಲ ಸಾರ್...'

**ಶೋಭಾ ಪ್ರಮೋದ್**



## ತಲೆಯ ಮೇಲೆ ಕಾಗೆ

ಜ್ಯೋತಿಷಿಯೊಬ್ಬರು ಸುತ್ತಲಿನ ಹತ್ತು ಊರುಗಳಲ್ಲಿ ಪ್ರಸಿದ್ಧಿ ಪಡೆದಿದ್ದರು. ಅವರ ಮನೆ ಮುಂದೆ ಪ್ರತಿ ದಿನ ಹೊರ ಊರಿನ ಜನ ಸೇರುವುದು ಸಾಮಾನ್ಯ ಸಂಗತಿ. ಅವತ್ತು ಒಂದು ದಿನ ಸುಬ್ಬ ತನ್ನದೊಂದು ಸಮಸ್ಯೆಗೆ ಪರಿಹಾರ ಕೇಳಲು ಬಂದ. ಬಂದವನು ಗಾಬರಿಯಿಂದ, 'ಜ್ಯೋತಿಷಿಗಳೆ, ತಲೆಯ ಮೇಲೆ ಕಾಗೆ ಕೂತು ಬಿಟ್ಟಿದೆ. ಏನು ಮಾಡಬೇಕು' ಎಂದು ಕೇಳಿದ. 'ಕಾಗೆಯೇ? ಯಾವಾಗ? ತಲೆಯ ಮೇಲೆ ಕಾಗೆ ಕುಳಿತರೆ ಒಂದೇ ವಾರದಲ್ಲಿ ಸಾವು ಖಚಿತ. ಎಷ್ಟು ದಿನ ಆಯ್ತು ಕಾಗೆ ಕುಳಿತು? ಅದಕ್ಕೆ ಏನಾದರೂ ಪರಿಹಾರ ಮಾಡಬೇಕಲ್ಲ' ಎಂದು ಅವರು ಆತಂಕದಿಂದಲೇ ಸುಬ್ಬನನ್ನು ಕೇಳಿದರು. ಅದಕ್ಕೆ ಅವನು ಸಮಾಧಾನದಿಂದ, 'ಆಗಲೇ ವರ್ಷವಾಯ್ತು' ಎಂದು ಅಲ್ಲಿಂದ ಎದ್ದು ಹೋದ. ಜ್ಯೋತಿಷಿಯ ಸುತ್ತ ಇದ್ದವರು ಪರಸ್ಪರ ಮುಖ ನೋಡಿಕೊಳ್ಳತೊಡಗಿದರು!

**ದೇವಿದಾಸ ಸುವರ್ಣ**



ಚಿತ್ರಗಳು: ಗಣೇಶ ಆಚಾರ್ಯ